# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ: 22/09/2021 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 20.12.2021 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, | ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ | 9513322144 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂ.174 | 9480688174 |
| 3 | ಶ್ರೀ ಬಿ.ಎನ್.ಆರ್ ರೆಡ್ಡಿ | ಸದಸ್ಯರು | 9989000017 |
| 4 | ಶ್ರೀ ಜಿ.ಚಂದ್ರಶೇಖರ | ಸದಸ್ಯರು 6ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | - |
| 5 | ಶ್ರೀ ಜಗನಾಥ | ಸಾರ್ವನಿಕರು | 9008716773 |
| 6 | ಶ್ರೀ ದಿನೇಶ್ | ಸಾರ್ವಜನಿಕರು | 984511320 |
| 7 | ಶ್ರೀ ರವಿಚಂದ್ರರಾವ | ಸಾರ್ವಜನಿಕರು | 9844167069 |
| 8 | ಶ್ರೀ ರಾಜೇಶ್ ಅರುಣಾಚಲಂ | ಸದಸ್ಯರು 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 7406999901 |
| 9 | ಶ್ರೀ ಚಿತ್ರ ಪ್ರಣೀತ್ | ಸಾರ್ವಜನಿಕರು | 9880038525 |
| 10 | ಶ್ರೀಧೀನ ದಯಾ | ಸಾರ್ವಜನಿಕರು | 9742436676 |
| 11 | ಶ್ರೀ ಬಿ.ವಿ ಶಣ್ಯೆ | ಸಾರ್ವಜನಿಕರು | |
| 12 | ಶ್ರೀ ಬಿ. ಗೋವಿಂದ ಸ್ವಾಮಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 13 | ಶ್ರೀ ಎನ್ ಗೋಪಾಲಾ ಕೃಷ್ಣ | ಸಾರ್ವಜನಿಕರು | - |
| 14 | ಶ್ರೀಮತಿ ಎ ಆರತಿ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9341960547 |
| 15 | ಶ್ರೀ ವೈ.ಡಿ ಶಂಕರಪ್ಪ | 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ | 9845123030 |

**(ಪು.ತಿ.ನೋ)**

Scanned with

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 16 | ಶ್ರೀಮತಿ ಜಯಲಕ್ಷ್ಮೀ | ಸಾರ್ವಜನಿಕರು | 9886024656 |
| 17 | ಶ್ರೀ ಕೃಷ್ಣಪ್ಪ | ಸಾರ್ವಜನಿಕರು | |
| 18 | ಶ್ರೀ ಮುನಿರೆಡ್ಡಿ | ಇನ್ಸ್‌ಪೆಕ್ಟರ್ ಹೆಚ್.ಎಸ್.ಆರ್ ಪೋಲಿಸ್ ಠಾಣೆ | |
| 19 | ಶ್ರೀ ಹನುಮಂತರಾಯ.ಟಿ | ಸ.ಕಾ.ಅ. (ಹೆಚ್.ಎಸ್.ಆರ್ ಉಪವಿಭಾಗ) | 9480688256 |
| 20 | ಶ್ರೀ ಚಂದ್ರಶೇಖರ | ತೋಟಗಾರಿಕೆ ಅಧೀಕ್ಷಕರು | 9845014293 |
| 21 | ಶ್ರೀ ನಾಗರಾಜ್ ಎ | ಸ.ಕಾ..ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444037 |
| 22 | ಶ್ರೀ ಸಾಯಿಬಣ್ಣ | ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444039 |
| 23 | ಶ್ರೀ ಯತೀಶ್ | ಸ.ಅ. ಎಸ್-20, ಬೆಸ್ಕಾಂ | 9449840476 |
| 24 | ಶ್ರೀ ರಾಮೇಶ್.ಡಿ | ಸ.ಅ ವಿದ್ಯುತ್ | 9480688559 |
| 25 | ಎಸ್ ಸುದೀರ್ | ಪಶುಸಂಗೋಪಾನೆ (ಹಿರಿಯ | 9845226800 |
| 26 | ಶ್ರೀ ಹರೀಶ್.ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 27 | ಶ್ರೀಮತಿ ಸತ್ಯವಾಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ: 174 | 8971434331 |
| 28 | ಶ್ರೀ ಹೆಚ್.ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |
| 29 | ಶ್ರೀ ರಾಜು | ಬೀದಿ ದೀಪ ನಿರ್ವಾಹಕರು | - |
| 30 | ಶ್ರೀ ಮಹೇಶ್ | ಬೀದಿ ದೀಪ ನಿರ್ವಾಹಕರು | 9986041663 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು. ಎಲ್ಲಾ ಅಧಿಕಾರಿ/ಸಿಬ್ಬಂದಿಯವರು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಸದಸ್ಯರುಗಳು ತಿಳಿಸುತ್ತಾ, ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ, ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿದರು.

- **ಘನತ್ಯಾಜ್ಯ**

ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯ 5ನೇ ಮುಖ್ಯ ರಸ್ತೆ ಯಿಂದ 27ನೇ ಮುಖ್ಯ ರಸ್ತೆ ಯವರೆಗೆ (17ನೇ ಅಡ್ಡ ರಸ್ತೆ) ಪಾದಚಾರಿ ಮಾರ್ಗದಲ್ಲಿ ತಳ್ಳುವಗಾಡಿ ವಾಣಿಜ್ಯ ಅಂಗಡಿಗಳ ಮುಂಭಾಗ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ಬೀದಿ ವ್ಯಾಪಾರಿಗಳಿಗೆ Commercial ಸ್ಟ್ರೀಟ್ ಮತ್ತು ಜಯನಗರ 9ನೇ ಬ್ಲಾಕ್ ನಲ್ಲಿರುವಂತ ಪ್ರತ್ಯೇಕ ಜಾಗವನ್ನು ವಲಯ ಜಂಟಿ ಆಯುಕ್ತರು, ಕಲ್ಯಾಣ ಇಲಾಖೆ, ಸಹಾಯಕ ಕಂದಾಯ ಅಧಿಕಾರಿ ರವರಿಗೆ ಜಾಗವನ್ನು ಗುರುತಿಸಿ ಸ್ಥಳ ನಿಗದಿ ಮಾಡುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ, ಶ್ರೀ ಚಂದ್ರಶೇಖರ್ ಮತ್ತು ಕಲ್ಯಾಣ ಸಂಘದ ಪ್ರತಿನಿದಿಗಳು ಹಾಗೂ ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದಿ ಹಿ.ಆ.ಪ. ವಿನೋದ್.ಜಿ ರವರು ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಸ.ಕಾ.ನಿ.ಅ, ಪೋಲಿಸ್ ಇಲಾಖೆ ರವರೊಂದಿಗೆ ಕ್ರಮಕೈಗೊಳ್ಳಲಾಗುತ್ತಿದ್ದು, ಹಂತ-ಹಂತವಾಗಿ ಈ ವಾರ್ಡ್‌ನಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲಾಗುವುದು ಹಾಗೂ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರಿಗೆ ಬೀದಿ ವ್ಯಾಪಾರಿಗಳಿಗೆ ಪ್ರತ್ಯೇಕವಾಗಿ ಪುಡ್ ಸ್ಟ್ರಿಟ್ ನಡೆಸಲು ಜಾಗವನ್ನು ನೀಡುವಂತೆ ಮನವಿ ಸಲ್ಲಿಸಲಾಗುವುದೆಂದು ತಿಳಿಸಿದರು.

(ಮು.ತಿ.ನೋ)

Scanned with

- **ತೋಟಗಾರಿಕೆ**
  1. ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯಲ್ಲಿ ಬೆಂಗಳೂರು ಒನ್ ಉದ್ಯಾನವದ ಒಳಗಡೆ ನಂದಿನಿ ಬೂತ್ ಅಂಗಡಿ ವ್ಯಾಪಾರ ಮಾಡುತ್ತಿದ್ದು, ಅದರಲ್ಲಿ ಟೀ, ಕಾಫೀ ಇತ್ಯಾದಿ ವ್ಯಾಪಾರ ನಡೆಯುತ್ತಿರುವ ಬಗ್ಗೆ ವಾರ್ಡ್ ಸದಸ್ಯರು, 1ನೇ ಸೆಕ್ಟರ್ ಕಲ್ಯಾಣ ಸಂಘಗಳ ಪ್ರತಿನಿದಿಗಳು ಹಾಗೂ ಸ್ಥಳೀಯರು ಸಭೆಯಲ್ಲಿ ದೂರು ನೀಡಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಚಂದ್ರಶೇಖರ್ ತೋಟಗಾರಿಕೆ ಅಧೀಕ್ಷಕರು (ಬೊ.ವ.) ರವರು ತಮ್ಮ ಇಲಾಖೆಯಿಂದ ಅನುಮತಿ ನೀಡಿರುವುದಿಲ್ಲವೆಂದು ತಿಳಿಸಿದ್ದು, ಹಾಗೂ ಸ್ಥಳ ಪರಿವೀಕ್ಷಣೆ ನಡೆಸಿ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
  2. ವಾರ್ಡ್ ವ್ಯಾಪ್ತಿಯ 1ನೇ ಸೆಕ್ಟರ್ ವಿನಾಯಕ ಉದ್ಯಾನವದಲ್ಲಿ ಹಳೆಯ Rotate gate ನಂತಹ ಗೇಟ್ ಅನ್ನು ಅಳವಡಿಸಲು ಸಭೆಯ ಗಮನಕ್ಕೆ ತಂದಿದ್ದು, ಇದಕ್ಕೆ ಪರಿಶೀಲಿಸಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಗೇಟ್ ಇಲ್ಲದಿರುವುದುನ್ನು ಪರಿಶೀಲಿಸಿ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು. ವಾರ್ಡ್ ವ್ಯಾಪ್ತಿಯ ಉದ್ಯಾನವಗಳನ್ನು ನಿರ್ವಹಣೆ ಮಾಡುವಂತೆ Walking track, Bench, ಸುತ್ತಮುತ್ತ ಫೆನ್ಸಿಂಗ್ ಅಳವಡಿಸಲು ಕಲ್ಯಾಣ ಸಂಘಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು, ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರು ರವರು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

- **ಅರಣ್ಯ ಇಲಾಖೆ**

ಹೆಚ್.ಎಸ್.ಆರ್. ಬಡಾವಣೆ ವ್ಯಾಪ್ತಿಯಲ್ಲಿ ಮರದ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಹಾಗೂ 7 ಅಡಿ ಎತ್ತರಕಿಂತ ಕಡಿಮೆ ಇರುವ ಮರದ ರೆಂಬೆಗಳನ್ನು ಹಿಂದಿನ ಸಭೆಯಲ್ಲಿ ಕತ್ತರಿಸುವಂತೆ ಚರ್ಚಿಸಲಾಗಿದ್ದು, ಇದುವರೆಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಹೆಚ್.ಆರ್ ಹರೀಶ್ ಅರಣ್ಯ ವಲಯ ಅಧಿಕಾರಿಗಳು ಈ ಬಗ್ಗೆ ಕಲ್ಯಾಣ ಸಂಘಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಮನೆಯ ಮಾಲೀಕರು ಪ್ರತ್ಯೇಕವಾಗಿ ಅರ್ಜಿ ಪಡೆದು ಸರ್ವೆ ಮಾಡಿ ತೆರವುಗೊಳಿಸಲು ಕ್ರಮ ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಶೀಘ್ರವಾಗಿ ಕ್ರಮವಹಿಸುವಂತೆ ಸೂಚಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**
  1. ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ಇಂದಿನ ಸಭೆಯಲ್ಲಿ ಮ್ಯಾನ್‌ಹೋಲ್‌ನಲ್ಲಿ ಹೂಳೆತ್ತಲು ಶ್ರೀ ಚಂದ್ರಶೇಖರ, ಶ್ರೀ ಬಿ.ಎನ್.ಆರ್ ರೆಡ್ಡಿ ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಒಂದು ತಿಂಗಳೊಳಗಾಗಿ ಟೆಂಡರ್ ಕರೆದು ಕಾರ್ಯದೇಶ ನೀಡಿದ ನಂತರ ಹೂಳೆತ್ತಲು ಕ್ರಮವಹಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು ರವರು ತಿಳಿಸಿದರು.
  2. ವಾರ್ಡ್ ವ್ಯಾಪ್ತಿಯ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಕಛೇರಿ ಮುಂಭಾಗದ ರಸ್ತೆಯಲ್ಲಿ ಅವಶೇಷಗಳು ಇದ್ದು, ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಓಡಾಡಲು ಕಷ್ಟವಾಗಿದ್ದು, ಕಛೇರಿ ಒಳಗಡೆ ಹಾಕಿಸುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ , ಶ್ರೀ ಚಂದ್ರಶೇಖರ ಮತ್ತು ಕಲ್ಯಾಣ ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಗುತ್ತಿಗೆದಾರರಿಗೆ ಸೂಚಿಸಿ ಸಾರ್ವಜನಿಕರಿಗೆ ಓಡಾಡಲು ಅನುವು ಮಾಡಿಕೊಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

(ಮು.ತಿ.ನೋ)

Scanned with

- **<u>ಬೆಸ್ಕಾಂ</u>**

1. ಹಿಂದಿನ ಸಭೆಯ ದಿನಾಂಕ: 26.11.2021 ರಂದು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಶ್ರೀ ಬಿ.ಎನ್.ಆರ್ ರೆಡ್ಡಿ ಸದಸ್ಯರ ರವರು ಸೆಕ್ಟರ್-6ರ ಪಾದಚಾರಿ ಮಾರ್ಗದಲ್ಲಿ ಬೆಸ್ಕಾಂ ಇಲಾಖೆಯಿಂದ ವಿದ್ಯುತ್ RMV ಅಳವಡಿಸಿದ್ದು, ಇದುವರೆಗೂ ಸ್ಥಳಾಂತರ/ ತೆರವುಗೊಳಿಸಿರುವುದಿಲ್ಲವೆಂದು ಪ್ರಸ್ತಾಪಿಸಿದ್ದು, ಇದಕ್ಕೆ ಸಭೆಗೆ ಹಾಜರಿದ್ದ ಶ್ರೀ ಯತೀಶ್ ಸಹಾಯಕ ಅಭಿಯಂತರರು, ಬೆಸ್ಕಾಂ ರವರು ಈಗಾಗಲೇ ಸ್ಥಳವನ್ನು ಸರ್ವೆ ಮಾಡಿಸಲಾಗಿದ್ದು, RMV ಸಂಪರ್ಕ ಮಾರ್ಗವನ್ನು ಈಗಾಗಲೇ ಸ್ಥಳವನ್ನು ಅಧೀಕ್ಷಕ ಅಭಿಯಂತರರು ಬೆಸ್ಕಾಂ ರವರಿಗೆ ಬದಲಾಯಿಸಲು ಮತ್ತು ಬೇರೆ ಸ್ಥಳವನ್ನು ನಿಗದಿಯಾದ ನಂತರ ಜನವರಿ ಅಂತ್ಯದೊಳಗೆ ತೆರವುಗೊಳಿಸುವ ಕಾರ್ಯವನ್ನು ಮಾಡಲಾಗುವುದೆಮದು ಸಭೆಗೆ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ಮಳೆನೀರು ಗಾಲುವೆ ವಿಭಾಗದಿಂದ 5ನೇ ಮುಖ್ಯ ರಸ್ತೆ, 9ನೇ ಮುಖ್ಯ ರಸ್ತೆ, ಮತ್ತು ಕೆಲವು ಪ್ರಮುಖ ರಸ್ತೆಗಳಲ್ಲಿ ಚರಂಡಿ ನಿರ್ಮಿಸಲಾಗಿದ್ದು, ಈ ಮಾರ್ಗದಲ್ಲಿ ಬೆಸ್ಕಾಂ ವತಿಯಿಂದ ಕೇಬಲ್ ಹಾದು ಹೋಗಿದ್ದು, ಇಂತಹ ಕೇಬಲ್ ಗಳನ್ನು ಏಜಾಟು ಮಾಡಿಸಿ ಮುಚ್ಚುವಂತೆ ಶ್ರೀ ಬಿ.ಎನ್.ಆರ್ ರೆಡ್ಡಿ, ಸದಸ್ಯರು ಮತ್ತು ಕಲ್ಯಾಣ ಸಂಘಗಳ ಪ್ರತಿನಿಧಿಗಳು ಮತ್ತು ಸಾರ್ವಜನಿಕರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಯತೀಶ್ ಸಹಾಯಕ ಅಭಿಯಂತರರು, ಬೆಸ್ಕಾಂ ರವರು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

- **<u>ಪೋಲಿಸ್ ಇಲಾಖೆ</u>**

ಹಿಂದಿನ ಸಭೆಯಲ್ಲಿ ಶ್ರೀ ಬಿ.ಎನ್.ಆರ್ ರೆಡ್ಡಿ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ 04 ಕಡೆ ನಾಕಬಂದಿ ಚೆಕ್ ಪೋಸ್ಟ್ ನಿರ್ಮಿಸಿ ಸಿಬ್ಬಂದಿಯನ್ನು ನಿಯೋಜಿಸಲು ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಬಗ್ಗೆ ಇಂದಿನ ಸಭೆಯಲ್ಲಿ ಹಾಜರಿದ್ದ ಶ್ರೀ ಮುನಿರೆಡ್ಡಿ ಇನ್ಸ್‌ಪೆಕ್ಟರ್ ರವರು ಬಿಬಿಎಂಪಿ ವತಿಯಿಂದ ಚೆಕ್‌ಪೋಸ್ಟ್ ನಿರ್ಮಿಸಿ, ನಮಗೆ ಹಸ್ತಾಂತರ ಮಾಡಿದ ನಂತರ ಅಂತಹ ಕಡೆ ಪೋಲಿಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದೆಂದು ಸಭೆಗೆ ತಿಳಿಸಿದರು.

- **<u>ಸಂಚಾರಿ ಪೋಲಿಸ್</u>**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ರಸ್ತೆಯಲ್ಲಿ 500 ಮೀ ದೂರದಲ್ಲಿ ಸಾರ್ವಜನಿಕರಿಗೆ ಕಾಣುವ ಹಾಗೆ Parking Board ವ್ಯವಸ್ಥೆ ಮಾಡಿಸಲು ವಾರ್ಡ್ ಸದ್ಯಸರು ಕೋರಿರುತ್ತಾರೆ ಹಾಗೂ ಪಾರ್ಕಿಂಗ್ ಮತ್ತು ಪಾದಚಾರಿ ಮಾರ್ಗದಲ್ಲಿ ವಾಹನವನ್ನು ನಿಲುಗಡೆ ಮಾಡಿರುರುವರಿಗೆ 10 ನಿಮಿಷ Announce ಮಾಡಿ ವಾಹನವನ್ನು ಸೀಜ್/ಟೋಯಿಂಗ್ ಮಾಡಲು ವಾರ್ಡ್ ಸದ್ಯಸರು ಕೋರಿರುತ್ತಾರೆ.

2. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆಗೆ ಅಡ್ಡಲಾಗಿ ದೊಡ್ಡ ಗ್ರಾತದ ವಾಹನಗಳನ್ನು ಓಡಾಡದಂತೆ ಬ್ಯಾರಿಕೆಡ್ ಅಳವಡಿಸಿದ್ದು, ಈ ಬಗ್ಗೆ ಆರಕ್ಷಕ ನಿರೀಕ್ಷಕರು ಸಂಚಾರಿ ಪೋಲಿಸ್ ಠಾಣೆ ರವರಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ

(ಪು.ತಿ.ನೋ)

Scanned with

- **ಕಾಮಗಾರಿ ಇಲಾಖೆ**

ಹಿಂದಿನ ಸಭೆಯ ದಿನಾಂಕ: 26.11.2021 ರಂದು 1ನೇ ಸೆಕ್ಟರ್ & 2ನೇ ಸೆಕ್ಟರ್, ಕ್ಷೇಮಾಭಿವೃದ್ದಿ ಸಂಘ ಕ್ಷೇಮಾಭಿವೃದ್ದಿ ಸಂಘ ಪ್ರಸ್ತಾಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಹಾಯಕ ಅಭಿಯಂತರರು ರವರು ಸರ್ಕಾರದ ಅಮೃತ ನಗರೋತ್ಥಾನ ಅನುದಾನ ಮತ್ತು ಪಾಲಿಕೆ ಅನುದಾನ ಬಿಡುಗಡೆಯಾದ ನಂತರ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಜಂಟಿ ಆಯುಕ್ತರು, ಮಹಾದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with